## ಪ್ರಧಾನ ಸಿವಿಲ್ ಜೆಡ್ಜ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ -1237/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂಜಯ್ | ಸಿಡಬ್ಲ್ಯೂ 2 |
| ತಂದೆಯ ಹೆಸರು | - | ಸುರೇಶ್ | ಪಿಡಬ್ಲ್ಯೂ 2 |
| ವಯಸ್ಸು | - | 30 ವರ್ಷ | |
| ಕೆಲಸ | - | ವ್ಯವಸಾಯ | ಸಾ.ಪ್ರ.ಬೋ |
| ವಾಸ | - | ಮಿರ್ಲೆ ಗ್ರಾಮ | ದಿ. 02.04.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ನನಗೆ ಚಾಸಾ 1 ಮತ್ತು ಆರೋಪಿ ಗೊತ್ತು. ದಿನಾಂಕಃ 19-04-2016 ರಂದು ಸಂಜೆ 4.00 ಗಂಟೆಗೆ ಆರೋಪಿ ಚಾಸಾ 1 ರವರಿಗೆ ಕರೆ ಮಾಡಿದ್ದರಿಂದ ಚಾಸಾ 1 ರವರು ನಮ್ಮ ಮನೆಗೆ ಬಂದಿರುತ್ತಾರೆ. ನಾನು ಮನೆಯ ಬಳಿ ಇದ್ದೆ. ಆಗ ನಮ್ಮ ಮನೆಯ ಬಾಗಿಲನ್ನು ತೆಗೆದು ಒಳಗೆ ಹೋಗುತ್ತಿದ್ದೆವು. ಆಗ ಆರೋಪಿ ಬಂದು ನಮಗೆ ಸೂಳೆ ಮಕ್ಕಳ, ಬೋಳಿಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಚಾಸಾ 1 ಏತಕ್ಕೆ ಬೈಯುತ್ತಿದ್ದೀಯಾ ಎಂದು ಕೇಳಿದಾಗ ಆಗ ಆರೋಪಿ ಹಗ್ಗದಿಂದ ಚಾಸಾ 1 ರವರ ಬಲಮುಖಕ್ಕೆ ಹೊಡೆದಿರುತ್ತಾರೆ. ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಮಚ್ಚಿನ ಹಿಂದುಗಡೆಯಿಂದ ಚಾಸಾ 1 ರವರ ಎಡಗಾಲಿಗೆ ಹೊಡೆದು ಗಾಯ ಮಾಡಿರುತ್ತಾರೆ. ನಾನು ಮತ್ತು ಚಾಸಾ 3 ಜಗಳ ಬಿಡಿಸಿರುತ್ತೇವೆ. ಆಟೋದಲ್ಲಿ ಚಾಸಾ 1 ನ್ನು ಸಾಲಿಗ್ರಾಮ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಮಾರನೇ ದಿನ ಚಾಸಾ 1 ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ. ಮುಮಾ 1 ಮತ್ತು 2 ನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ.

ಈ ಹಂತದಲ್ಲಿ ಶ್ರೀ ಎಪಿಪಿಯವರು ಸಾಕ್ಷಿಯನ್ನು ಭಾಗಶಹ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದ

2) ಜಗಳ ಬಿಡಿಸಿದ ಮೇಲೆ ನೀನೇನಾದರು ಪೊಲೀಸರಿಗೆ ದೂರು ನೀಡಿದರೆ ಮುಗಿಸುತ್ತೇನೆ ಎಂದು ಆರೋಪಿ ಚಾಸಾ 1 ರವರಿಗೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ..

ಪಾಟೀ ಸವಾಲು -

ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಸಮಯ ಕೋರಿದ್ದು, ಯಾವುದೇ ಸಕಾರಣ ಇರುವುದಿಲ್ಲ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ

## ಪ್ರಧಾನ ಸಿವಿಲ್ ಜೆಡ್ಜ್ ವತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಕೆ. ಆರ್. ನಗರ

**ಸಿಸಿ -1237/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗಿರೀಶ್ | ಸಿಡಬ್ಲ್ಯೂ 1 |
| ತಂದೆಯ ಹೆಸರು | - | ಲಕ್ಕೇಗೌಡ | ಪಿಡಬ್ಲ್ಯೂ 1 |
| ವಯಸ್ಸು | - | 35 ವರ್ಷ | |
| ಕೆಲಸ | - | ಪ್ರಿಂಟಿಂಗ್ ಪ್ರೆಸ್ ನಲ್ಲಿ ಕೆಲಸ | ಸಾ.ಪ್ರ.ಬೋ |
| ವಾಸ | - | ಚಿಕ್ಕವಡ್ಡರಗುಂಡಿ | ದಿ. 02.04.2019 |

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ

1) ನನಗೆ ಚಾಸಾ 2 ರಿಂದ 4 ಗೊತ್ತು. ಆರೋಪಿ ಸಿದ್ದೇಗೌಡ ಗೊತ್ತು. ದಿನಾಂಕಃ 19-04-2016 ಕ್ಕಿಂತ 3-4 ದಿನ ಮೊದಲು ಆರೋಪಿ ನಮ್ಮ ಅತ್ತೆ ವೇದಾವತಿಯವರ ಜಮೀನಿನಲ್ಲಿರುವ ಮರ ಖರೀದಿ ಮಾಡಬೇಕೆಂದು ಮೂರು ಸಾರಿ ಕರೆ ಮಾಡಿದ್ದ. ದಿನಾಂಕಃ 19-04-2016 ರಂದು ಸುಮಾರು 4.00 ಗಂಟೆಗೆ ಮಿರ್ಲೆ ಗ್ರಾಮದ ನನ್ನ ಅತ್ತೆ ವೇದಾವತಿಯವರ ಮನೆಗೆ ಹೋಗಿರುತ್ತೇನೆ. ಆಗ ಚಾಸಾ 2 ಮನೆಯ ಬಳಿ ಇದ್ದು ಆಗ ನಾನು, ಚಾಸಾ 2 ಮನೆ ಒಳಗಡೆ ಹೋಗಿರುತ್ತೇವೆ. ಆಗ ಆರೋಪಿ ಏಕಾಏಕಿ ನಮ್ಮ ಅತ್ತೆಯ ಮನೆ ಒಳಗಡೆ ಬಂದು ನನಗೆ ಸೂಳೆಮಗನೆ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಮ್ಮ ಕುಟುಂಬದ ಸದಸ್ಯರಿಗೂ ಸಹ ಆರೋಪಿ ಬೈದಿರುತ್ತಾನೆ. ನಾನು ಏಕೆ ಆ ರೀತಿ ಮಾತನಾಡುತ್ತೀಯಾ ಎಂದು ಕೇಳಿದ್ದಕ್ಕೆ ಆರೋಪಿ ಹಗ್ಗದಿಂದ ನನ್ನ ಬಲ ಮುಖಕ್ಕೆ ಹೊಡೆದಿರುತ್ತಾನೆ. ಆಗ ಅಲ್ಲಿಯೇ ಇದ್ದ ಒಂದು ಮಚ್ಚನ್ನು ತೆಗೆದುಕೊಂಡು ಮಚ್ಚಿನ ಹಿಂಭಾಗದಿಂದ ನನ್ನ ಎಡಗಾಲಿನ ಮಂಡಿಗೆ ಹೊಡೆದು ಗಾಯಪಡಿಸಿರುತ್ತಾನೆ. ಆಗ ಚಾಸಾ 2 ಮತ್ತು 3 ರವರು ಜಗಳ ಬಿಡಿಸಿರುತ್ತಾರೆ. ಮಚ್ಚು ಮತ್ತು ಹಗ್ಗವನ್ನು ಅಲ್ಲಿಯೇ ಬಿಸಾಡಿ ಪೊಲೀಸರಿಗೆ ದೂರು ನೀಡಿದರೆ ನಿನ್ನನ್ನು ಮುಗಿಸುತ್ತೇನೆ ಎಂದು ಆರೋಪಿ ಬೆದರಿಕೆ ಹಾಕಿರುತ್ತಾನೆ.

2) ಆಗ ನನ್ನನ್ನು ಚಾಸಾ 4 ರವರು ಸಾಲಿಗ್ರಾಮ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ದೂರನ್ನು ನೋಡಿ ಗುರ್ತಿಸಿದ್ದು, ದೂರನ್ನು ನಿಪಿ1 ಎಂದು, ಸಾಕ್ಷಿ ಸಹಿಯನ್ನು ನಿಪಿ1 ಎ ಎಂದು ಗುರ್ತಿಸಲಾಯಿತು. ದೂರು ನೀಡಿದ ದಿನವೇ ಪೊಲೀಸರು ಬಂದಿರುತ್ತಾರೆ. ಪೊಲೀಸರಿಗೆ

ಸ್ಥಳವನ್ನು ತೋರಿಸಿರುತ್ತೇನೆ. ಘಟನಾ ಸ್ಥಳದಲ್ಲಿದ್ದ ಹಗ್ಗ ಮತ್ತು ಮಚ್ಚನ್ನು ಪೊಲೀಸರು ಪಂಚನಾಮೆ ಮಾಡಿ ವಶಪಡಿಸಿಕೊಂಡು ಮಹಜರ್ ಮಾಡಿರುತ್ತಾರೆ. ಮಹಜರ್ ನ್ನು ನಿಪಿ2 ಎಂದು ಮತ್ತು ಸಾಕ್ಷಿ ಸಹಿಯನ್ನು ನಿಪಿ2 ಎ ಎಂದು ಗುರ್ತಿಸಲಾಯಿತು. ಸಾಕ್ಷಿಯು ಕೃತ್ಯಕ್ಕೆ ಬಳಸಿದ ಹಗ್ಗ ಮತ್ತು ಮಚ್ಚನ್ನು ನೋಡಿ ಗುರ್ತಿಸಿದ್ದು, ಒಂದು ಪ್ಲಾಸ್ಟಿಕ್ ಹಗ್ಗವನ್ನು ಮುಮಾ 1 ಎಂದು, ಕಬ್ಬಿಣದ ಮಚ್ಚನ್ನು ಮುಮಾ 2 ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರ್ತಿಸಿರುತ್ತಾರೆ.

<u>ಪಾಟೀ ಸವಾಲು -</u>

ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಸಮಯ ಕೋರಿದ್ದು, ಯಾವುದೇ ಸಕಾರಣ ಇರುವುದಿಲ್ಲ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ